**ದಿನಾಂಕ: 02/02/2019 ರಂದು ಹಗದೂರು ವಾರ್ಡ್ ಸಂಖ್ಯೆ: 84ರ ವಾರ್ಡ್ ಕಮಿಟಿಯು ಮಾನ್ಯ ಪಾಲಿಕೆ ಸದಸ್ಯರಾದ ಶ್ರೀ.ಎಸ್.ಉದಯ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡವಳಿಗಳು:-**

**<u>ಹಾಜರಿದ್ದ ಅಧಿಕಾರಿ ಹಾಗೂ ಸಿಬ್ಬಂದಿಗಳು</u>**

1) ಸಹಾಯಕ ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ಉಪವಿಭಾಗ
2) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ
3) ಉಪ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ
4) ಸಹಾಯಕ ಅಭಿಯಂತರರು, ಹಗದೂರು ವಾರ್ಡ್ ನಂ.84
5) ಕಿರಿಯ ಅಭಿಯಂತರರು, ಬೆಸ್ಕಾಂ,
6) ಹಿರಿಯ ಆರೋಗ್ಯ ನಿರೀಕ್ಷಕರು, ಹಗದೂರು ವಾರ್ಡ್ ನಂ.84
7) ರಾಜಸ್ವ ನಿರೀಕ್ಷಕರು, ಕಂದಾಯ ಶಾಖೆ, ಬಿಬಿಎಂಪಿ, ಹಗದೂರು ವಾರ್ಡ್ ನಂ.84
8) ಹಗದೂರು ವಾರ್ಡ್ ಕಮಿಟಿ ಸದಸ್ಯರು ಮತ್ತು ಸಾರ್ವಜನಿಕರು

**ಸಭೆಯು ಬೆಳಗ್ಗೆ 11:30 ಘಂಟೆಗೆ ಪ್ರಾರಂಭವಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆಯಲ್ಲಿ ಹಾಜರಿದ್ದ, ಅಧ್ಯಕ್ಷರು, ಹಾಗೂ ಎಲ್ಲಾ ಮಾನ್ಯ ವಾರ್ಡ್ ಸಮಿತಿ ಸದಸ್ಯರನ್ನು, ಅಧಿಕಾರಿಗಳನ್ನು, ಸಾರ್ವಜನಿಕರನ್ನು ಸಿ.ನಾರಾಯಣಸ್ವಾಮಿ, ಸ.ಅ ರವರು ಸಭೆಗೆ ಸ್ವಾಗತಿಸಿದರು,

2. ದಿನಾಂಕ: 05/01/2019 ರ ಹಿಂದಿನ ಸಭೆಯ ನಡುವಳಿಯಂತೆ ಚರ್ಚಿಸಿದ ವಿಷಯಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಿಷಯವಾರು ಚರ್ಚಿಸಿ, ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಯಿತು.

3. ನಾಗೊಂಡನಹಳ್ಳಿ ವಿಜಯನಗರ ರಸ್ತೆ ಅಭಿವೃದ್ಧಿ ಕಾಮಗಾರಿ ನಿಲ್ಲಿಸಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಸಂಬಂಧಪಟ್ಟಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ ರವರು ವಿವರಣೆ ನೀಡಿ ಟೆಂಡರ್ ಪ್ರಗತಿಯಲ್ಲಿದ್ದು, ಕಾರ್ಯದೇಶ ಪಡೆದು ಮುಂದಿನ ತಿಂಗಳು ಮೊದಲನೆಯ ವಾರದಲ್ಲಿ ಕಾಮಗಾರಿ ಪ್ರಾರಂಭಿಸುವುದಾಗಿ ಸಭೆಗೆ ತಿಳಿಸಿದರು.

   <u>ಕ್ರಮ:</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ರ.ಮೂ.ಸೌ

4. ಬೆಸ್ಕಾಂ ಇಲಾಖೆಯ ಬಗ್ಗೆ ಚರ್ಚೆಯಾಗಿ ವಿಜಯನಗರದ ವ್ಯಾಪ್ತಿಯ ಕೆಲವು ವಿಲ್ಲಾಗಳಲ್ಲಿ ಕೇಬಲ್ ಸಮಸ್ಯೆಯಾಗಿ, ಟ್ರಾನ್ಸಫಾರ್ಮರ್ ಸಮಪರ್ಕವಾಗಿ ಕೆಲಸ ನಿರ್ವಹಿಸದೇ ವಿದ್ಯುತ್ ಅಡಚಣೆ ಹೆಚ್ಚಾಗಿರುವ ಬಗ್ಗೆ ಸಭೆಯ ಗಮನಕ್ಕೆ ಬಂದಿದ್ದು, ಸಭೆಗೆ ಹಾಜರಿದ್ದ ಕಿರಿಯ ಅಭಿಯಂತರರನ್ನು ಇದರ ಬಗ್ಗೆ ವಿವರಣೆ ನೀಡಿ ಇದು ವೈಯಕ್ತಿಕ ಸಮಸ್ಯೆಯಾಗಿದ್ದು, ವಿಲ್ಲಾಗಳ ಮಾಲೀಕರೇ ಇದನ್ನು ಸರಿಪಡಿಸಿಕೊಳ್ಳಬೇಕು ಮತ್ತು ಸಾಮಾಗ್ರಿಗಳನ್ನು ಒದಗಿಸಿದ್ದಲ್ಲಿ ನಮ್ಮ ಸಹಕಾರ ನೀಡಲಾಗುವುದೆಂದು ಹಾಗೂ ಟ್ರಾನ್ಸಫಾರ್ಮರ್‌ನ ಮೇಲೆ ಹೆಚ್ಚಿನ ಒತ್ತಡ ಬಂದಾಗ ವಿದ್ಯುತ್ ಅಡಚಣೆಯಾಗುತ್ತದೆ ಎಂದು ಸಭೆಗೆ ತಿಳಿಸಿದರು.

   <u>ಕ್ರಮ:</u> ಕಿರಿಯ ಅಭಿಯಂತರರು, ಬೆಸ್ಕಾಂ,

5. ವಿಜಯನಗರ ವ್ಯಾಪ್ತಿಯ ಸ್ಪಿಂಗ್-ಡೇಲ್ ಲೇಔಟ್‌ನ ರಸ್ತೆಯಲ್ಲಿ ಕೇಬಲ್ ವೈಯರ್ಸ್ ರಸ್ತೆಯ ಪಕ್ಕದಲ್ಲಿ ಬಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಲಾಯಿತು. ಕೂಡಲೇ ತೆರವುಗೊಳಿಸಲು ವಾರ್ಡ್ ಅಭಿಯಂತರರಿಗೆ ಸೂಚಿಲಾಯಿತು.

   <u>ಕ್ರಮ:</u> ವಾರ್ಡ್ ಅಭಿಯಂತರರು

6. ಹಗದೂರು ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕಾವೇರಿ ಪೈಪ್ ಲೈನ್‌ನ್ನು ಅಳವಡಿಸಿದ್ದು, ಕೆಲವು ರಸ್ತೆಗಳಲ್ಲಿ ಸರಿಯಾಗಿ ರೆಸ್ಟೋರೇಷನ್ ಮಾಡಿಲ್ಲವೆಂದು ಸಭೆಯಲ್ಲಿ ಸಾರ್ವಜನಿಕರು ದೂರು ನೀಡಿದರು. ಅದಕ್ಕೆ ವಾರ್ಡ್ ವ್ಯಾಪ್ತಿಯಲ್ಲಿ ತುರ್ತಾಗಿ ರೆಸ್ಟೋರೇಷನ್ ನಿರ್ವಹಿಸಲು ಗುತ್ತಿಗೆದಾರರನ್ನು ಮಹದೇವಪುರ ವಿಭಾಗ ಮಟ್ಟದಲ್ಲಿ ಗುರುತಿಸಿದ್ದು, ಕಾರ್ಯದೇಶವನ್ನು ನೀಡಿರುತ್ತಾರೆ. ತಕ್ಷಣ ಕಾಮಗಾರಿಯನ್ನು ಪ್ರಾರಂಬಿಸಲು ಕ್ರಮ ವಹಿಸಲಾಗುವುದು ಎಂದು ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿದರು.

<u>ಕ್ರಮ:</u> ವಾರ್ಡ್ ಅಭಿಯಂತರರು

7. ವಾರ್ಡ್ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯದ ಬಗ್ಗೆ ಚರ್ಚಿಸಲಾಗಿ ಕಸದ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರನ್ನು ಕೋರಲಾಯಿತು. ಅಬ್ರಹಾಮ್ ಪೌರಕಾರ್ಮಿಕ ಈತ ಕೆಲಸ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸದೇ ಕಾರ್ಮಿಕರಲ್ಲಿಯೇ ಗುಂಪುಗಾರಿಕೆ ಸೃಷ್ಠಿಸಿ, ಸಂಘ ಸ್ಥಾಪನೆ ಮಾಡುವುದಾಗಿ ಹೇಳಕೊಂಡು ಕಾಲಹರಣ ಮಾಡುತ್ತಿರುವುದನ್ನು ತುರ್ತಾಗಿ ಈತನನ್ನು ಬಿಡುಗಡೆಗೊಳಿಸಲು ಕ್ರಮ ವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ಕ್ರಮ:</u> ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ.84

8. ನಾಗೊಂಡನಹಳ್ಳಿ ಸರ್ವೆ ನಂ.124 ರಲ್ಲಿ ಸರ್ಕಾರಿ ಜಾಗದಲ್ಲಿ ಪ್ರೀಸ್ಟೀಜ್ ಗ್ಲೇನ್ ಮಾರ್ಗನ್ ವಸತಿ ಸಮುಚ್ಚಯ ಪಕ್ಕದಲ್ಲಿ ಚರಂಡಿ ನಿರ್ಮಾಣ ಮಾಡಲು ಸಭೆಯಲ್ಲಿ ಕೋರಲಾಯಿತು. ಇದರ ಬಗ್ಗೆ ಚರ್ಚಿಸಿ, ಅನುದಾನದ ಅವಶ್ಯಕತೆಗೆ ತಕ್ಕಂತೆ ತುರ್ತು ಕ್ರಮ ವಹಿಸಲು ನಿರ್ಧರಿಸಲಾಯಿತು.

<u>ಕ್ರಮ:</u> ವಾರ್ಡ್ ಅಭಿಯಂತರರು

9. ವಾರ್ಡ್ ಕಮಿಟಿ ಸಭೆಯನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲಾ ವಾರ್ಡ್‌ಗಳಲ್ಲಿಯೂ ಪ್ರತಿ ತಿಂಗಳು 2ನೇ ಶನಿವಾರ ನಡೆಸಲು ಆದೇಶವಾಗಿರುವುದರಿಂದ, ಕೆಲವು ಅಧಿಕಾರಿಗಳಿಗೆ ಒಂದೇ ದಿನ 2-3 ಕಡೆ ಸಭೆಗೆ ಹಾಜರಾಗಬೇಕಾದಾಗ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಅವಕಾಶವಿದ್ದಲ್ಲಿ ಸಭೆಯ ದಿನವನ್ನು ಬದಲಾವಣೆ ಪಡಿಸುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕೆಲವು ವಾರ್ಡ್ ಕಮಿಟಿ ಸದಸ್ಯರು ಸೂಚಿಸಿರುತ್ತಾರೆ. ಇದರ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ವಹಿಸಲಾಗುವುದು ಎಂದು ಸಭೆಯಲ್ಲಿ ವಾರ್ಡ್ ಅಭಿಯಂತರರು ತಿಳಿಸಿರುತ್ತಾರೆ.

<u>ಕ್ರಮ:</u> ವಾರ್ಡ್ ಅಭಿಯಂತರರು

10. ಹಿಂದಿನ ಸಭೆಯಲ್ಲಿ ಕೆಲವು ನಾಗರೀಕರು ಕಂದಾಯ ಇಲಾಖೆಯ ಅಧಿಕಾರಿಗಳು ಖಾತೆಗಳನ್ನು ನೀಡಲು ತಡ ಮಾಡುತ್ತಿರುವುದಾಗಿ ದೂರನ್ನು ನೀಡಲಾಗಿತ್ತು. ಅದಕ್ಕೆ ಮಾನ್ಯ ಅಧ್ಯಕ್ಷರು ಸ್ಪಂದಿಸಿ, ಸಭೆಯಲ್ಲಿ ಕಂದಾಯ ಇಲಾಖೆಯಿಂದ ತಡವಾಗಿದ್ದ ಖಾತೆಗಳನ್ನು ಎಲ್ಲಾ ನಾಗರೀಕರಿಗೆ ಖಾತೆ ನೊಂದಣಿ ಪತ್ರಗಳನ್ನು ಸಭೆಯಲ್ಲಿಯೇ ವಿತರಿಸಲಾಯಿತು.

ರೀಕ್ಷಕರು, ಕಂದಾಯ ಶಾಖೆ, ಬಿಬಿಎಂಪಿ, ಹಗದೂರು ವಾರ್ಡ್ ನಂ.84

11. ಕಂದಾಯ ಇಲಾಖಾ ವಿಷಯಗಳ ಬಗ್ಗೆ ಚಿರ್ಚಿಸಲಾಗಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಂದಾಯ ಇಲಾಖೆಯ ಅಧೀನದಲ್ಲಿರುವ ಸರ್ವೆ ನಂಬರ್ ಜಮೀನುಗಳನ್ನು ಬಿಬಿಎಂಪಿ ವ್ಯಾಪ್ತಿಗೆ ವರ್ಗಾಹಿಸಿಕೊಡಲು ಕ್ರಮ ತೆಗೆದುಕೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಉಪ ತಹಶೀಲ್ದಾರ್ ರವರನ್ನು ಕೆಲವು ಸದಸ್ಯರು ಕೋರಲಾಗಿ ಅದಕ್ಕೆ ಸಂಬಂಧಪಟ್ಟ ಸರ್ವೆ ನಂಬರ್ ಮತ್ತು ದಾಖಲೆಗಳೊಂದಿಗೆ ತಹಶೀಲ್ದಾರ್ ರವರಿಗೆ ಕೋರಿದ್ದಲ್ಲಿ ಅದಕ್ಕೆ ಸೂಕ್ತ ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

<u>ಕ್ರಮ:</u> ಉಪ ತಹಶೀಲ್ದಾರ್, ಬೆಂ.ಪೂ.ತಾಲ್ಲೂಕು

12. ಹಗದೂರು ವ್ಯಾಪ್ತಿಯಲ್ಲಿ ಹಗದೂರು ಗ್ರಾಮದಲ್ಲಿ ಶರಣ್ಯ ಶಾಂತಿನಿಕೇತನ್ ಅಪಾರ್ಟ್‌ಮೆಂಟ್‌ನ ಹಿಂದೆ ಸರ್ಕಾರಿ ಜಾಗದ ಪಕ್ಕದಲ್ಲಿ ನಿರ್ಮಿಸುತ್ತಿರುವ ಬೃಹತ್ ವಸತಿ ಸಮುಚ್ಚಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೂಲಿ ಕಾರ್ಮಿಕರು ಶೆಡ್‌ಗಳನ್ನು ಹಾಕಿಕೊಂಡು ವಾಸವಾಗಿದ್ದು, ತೆರದ ಜಾಗದಲ್ಲಿಯೇ ಬಯಲು ಶೌಚ / ಬಹಿರ್ದೆಸೆ ಮಾಡುತ್ತಿದ್ದು, ಮತ್ತು ಡೆಬ್ರೀಸ್ / ಕಸವನ್ನು ಅಲ್ಲಿಯೇ ಹಾಕುತ್ತಿದ್ದು, ಇದರಿಂದ, ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುವ ಜನರಿಗೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಸಭೆಯಲ್ಲಿ ದೂರು ನೀಡಲಾಗಿ, ಇದರ ಬಗ್ಗೆ ಚರ್ಚಿಸಿ ಹಿರಿಯ ಆರೋಗ್ಯ ಪರಿವೀಕ್ಷಕರು ಇದರ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

<u>ಕ್ರಮ:</u> ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 84

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಚರ್ಚಿಸಿದಂತಾ ಎಲ್ಲಾ ವಿಷಯಗಳ ಬಗ್ಗೆ ತುರ್ತು ಕ್ರಮ ವಹಿಸಲು ಹಾಜರಿದ್ದ ಅಧಿಕಾರಿಗಳಿಗೆ ಆದೇಶಿಸಿದರು. ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಮತ್ತು ಕಾಮಗಾರಿಗಳನ್ನು ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಪ್ರಾರಂಭಿಸಲಾಗಿದೆ, ಎಂದು ಸಭೆಯಲ್ಲಿ ತಿಳಿಸಿ, ಸಭೆಯಲ್ಲಿ ಇದ್ದ ಎಲ್ಲಾ ಸದಸ್ಯರಿಗೂ, ಸಾರ್ವಜನಿಕರಿಗೆ ಅಭಿನಂದಿಸಿದರು

ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸಭೆಗೆ ಹಾಜರಿದ್ದ ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/- | ಸಹಿ/- |
| ಅಧ್ಯಕ್ಷರು | ಕಾರ್ಯದರ್ಶಿ ಮತ್ತು ಸಂಚಾಲಕರು |
| ಶ್ರೀ. ಎಸ್.ಉದಯ್ ಕುಮಾರ್ | ಸಿ.ನಾರಾಯಣಸ್ವಾಮಿ |
| ಪಾಲಿಕೆ ಸದಸ್ಯರು, ವಾರ್ಡ್ ನಂ: 84 | ಸ.ಅ ವಾರ್ಡ್ ನಂ: 84 |

**ಪ್ರತಿಯನ್ನು:**

1) ಮಾನ್ಯ ಜಂಟಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
2) ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
3) ಕೌನ್ಸಿಲ್ ಕಾರ್ಯದರ್ಶಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
4) ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೆ ಕ್ರಮಕ್ಕಾಗಿ
5) ಎಲ್ಲಾ ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ
6) ಕಛೇರಿ ಪ್ರತಿ.